ಗಂಗಾವತಿ ತಾಲ್ಲೂಕಿನ ಕಾರಟಗಿಯಲ್ಲಿ ಬಾಲಕಿಯರ ಪ್ರೌಢಶಾಲೆ ತೆರೆಯುವ ಬಗ್ಗೆ

೨೦೭೫. ಶ್ರೀ ಶ್ರೀರಂಗದೇವರಾಯಲು (ಹನಕಗಿರಿ).—ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗಂಗಾವತಿ ತಾಲ್ಲೂಕಿನ ಕಾರಟಗಿಯಲ್ಲಿ ಬಾಲಕಿಯರ ಪ್ರೌಢಶಾಲೆಯ ಅವಶ್ಯಕತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಈ ಬಗ್ಗೆ ೧೯೮೬ರಿಂದಲೂ ಸರ್ಕಾರದವರ ಗಮನಕ್ಕೆ ತರುತ್ತಿದ್ದಾರೆಯೂ ಯಾವ ಕ್ರಮ ವನ್ನು ಕೈಗೊಳ್ಳದಿರುವುದರಿಂದ ವಿದ್ಯಾರ್ಥಿನಿಯರಿಗೆ ತೊಂದರೆ ಆಗಿರುವುದು ನಿಜವಲ್ಲವೇ ?

ಇ) ಒಂದು ತರಗತಿಯಲ್ಲಿ ಸುಮಾರು ೧೭೫ಕ್ಕೂ ಹೆಚ್ಚು ವಿದ್ಯಾರ್ಥಿಗಳಿದ್ದು, ಆ ಪೈಕಿ ೭೫–೮೦ಕ್ಕೂ ಹೆಚ್ಚು ಹೆಣ್ಣುಮಕ್ಕಳಿದ್ದು, ಅಲ್ಲಿ ಬಾಲಕಿಯರ ಪ್ರೌಢಶಾಲೆಯ ಅಗತ್ಯ ಅತಿಯಾಗಿರುವುದರಿಂದ ಶಾಲೆಯನ್ನು ತೆರೆಯಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮಂತ್ರಿಗಳು).—

ಅ) ಬಂದಿದೆ.

ಆ) ತೊಂದರೆಯಾಗಿಲ್ಲ.

ಇ) ಸರ್ಕಾರ ಪರಿಶೀಲಿಸಿ ಅವಶ್ಯಕತೆ ಕಂಡುಬಂದರೆ ಕ್ರಮ ಕೈಗೊಳ್ಳಲಾಗುವುದು.

ವಿಜಾಪುರ ಜಿಲ್ಲೆಯ ನೀರಾವರಿ ಕೆರೆಗಳ ವಿಚಾರ

೧೫೧೮. ಶ್ರೀ ಬಾಬುರೆಡ್ಡಿ ಮೆಂ.ತಂಗಳ್ (ಬೀಳಗಿ).—ಮಾನ್ಯ ಸಣ್ಣ ಹಾಗೂ ಮಿತ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವಿಜಾಪುರ ಜಿಲ್ಲೆಯಲ್ಲಿರುವ ನೀರಾವರಿ ಕೆರೆಗಳ ಸಂಖ್ಯೆ ಎಷ್ಟು ? (ತಾಲ್ಲೂಕುವಾರು ಮಾಹಿತಿ ನೀಡುವುದು)

ಆ) ಇವುಗಳಿಂದ ನೀರಿನ ಸೌಕರ್ಯ ಸಿಗುತ್ತಿರುವ ಕ್ಷೇತ್ರದ ಪ್ರಮಾಣವೆಷ್ಟು ? (ತಾಲ್ಲೂಕುವಾರು ಮಾಹಿತಿ ಒದಗಿಸುವುದು)

ಇ) ಈ ಕೆರೆಗಳಲ್ಲೆಲ್ಲಾ ಅನೇಕ ವರ್ಷಗಳಿಂದ ಹೂಳು ತುಂಬಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಈ) ಹಾಗಿದ್ದರೆ ಹೂಳು ಹೊರ ತೆಗೆಯಲು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಕೆ. ಕೃಷ್ಣಮೂರ್ತಿ (ಸಣ್ಣ ಹಾಗೂ ಮಿತ ನೀರಾವರಿ ರಾಜ್ಯ ಮಂತ್ರಿಗಳು).—

ಅ) ಮತ್ತು ಆ) ಪಟ್ಟಿಯನ್ನು ಲಗತ್ತಿಸಲಾಗಿದೆ.

ಇ) ಹೌದು.

ಈ) ಹೂಳು ತುಂಬಿರುವ ಕೆಲವು ಕೆರೆಗಳನ್ನು ಆರ್ಥಿಕ ಲಭ್ಯತೆಯನ್ನವಲಂಬಿಸಿ ಹಂತ ಹಂತ ವಾಗಿ ಹೂಳೆತ್ತಲು ಕ್ರಮ ತೆಗೆದುಕೊಳ್ಳಲಾಗುವುದು.